ಕಂಪ್ಯೂಟರ್‌ನಲ್ಲಿ ಏನನ್ನೊ ಕೀ ಮಾಡುತ್ತಿದ್ದ ತೇಜಸ್ವಿ ತಲೆಎತ್ತಿ ನೋಡಿದ. ಎದುರಿಗೆ ಸುಪ್ರಿಯಾ ಶೆಟ್ಟಿ ನಿಂತಿದ್ದಾಳೆ! 'ರಾಮ್ಮಾ, ನಾ ಬಂಗಾರು ಚೆಲ್ಲಿ...' ಅನ್ನುತ್ತ ಮುಗುಳ್ನಕ್ಕ.

ನೀನು ಕೂತಿರೋದು ನನ್ನ ಸೀಟ್‌ನಲ್ಲಿ. ಮೊದಲು ಅಲ್ಲಿಂದ ಏಳು ಅನ್ನುವಂತೆ ಸುಪ್ರಿಯಾ ನಿಂತೇ ಇದ್ದಳು. ತೇಜಸ್ವಿಗೆ ಅರ್ಥವಾಯಿತು. ಫೈಲ್ ಕ್ಲೋಸ್ ಮಾಡಿ ಕುರ್ಚಿಯಿಂದ ಎದ್ದು ಅವಳ ಕಡೆಗೆ ನೋಡದೆ ಇನ್ನೊಂದು ಕಂಪ್ಯೂಟರ್ ಮುಂದೆ ಹೋಗಿ ಕೂತು ಕೆಲಸ ಮುಂದುವರಿಸಿದ.

'ಬಂಗಾರ ಬಿಲ್ಲಿ ಅಂತ ಏನೋ ಹೇಳಿದನಲ್ಲ...' ಅಂತ ತುಳು ಮನೆಮಾತಿನ ಸುಪ್ರಿಯಾಗೆ ತಲೆ ಕೆಟ್ಟುಹೋಯಿತು. ಅವನು ಟೀಸ್ ಮಾಡಿರಬಹುದು ಅಂತಲೇ ಭಾವಿಸಿದಳು.

ಆಫೀಸಿಗೆ ಬರ್ತಿದ್ದಂತೆ ಮೂಡ್ ಆಫ್ ಮಾಡಿದ ಶನಿ ಅಂತ ತುಳುನಲ್ಲಿ ಗೊಣಗಿಕೊಂಡಳು. ಕೈಯಲ್ಲಿದ್ದ ಬ್ಯಾಗನ್ನು ಕುರ್ಚಿಯ ಮೇಲೆ ಕುಕ್ಕಿ ಅಲ್ಲಿಂದ ಹೋಗಿಬಿಟ್ಟಳು. ತೇಜಸ್ವಿ ಅವಳನ್ನು ಗಮನಿಸಲಿಲ್ಲ. ಮ್ಯಾಗಜೈನ್ ಸೆಕ್ಷನ್‌ಗೆ ಹೋಗಿ ಅಲ್ಲಿ ಖಾಲಿ ಇದ್ದ ಕಂಪ್ಯೂಟರ್ ಓಪನ್ ಮಾಡಿ ಕೂತಳು.

ಬಂದು ಇನ್ನೂ ಮೂರು ತಿಂಗಳಾಗಿಲ್ಲ. ಸುಮ್ಮನಿದ್ದರೆ ಸಿಲ್ಲಿಯಾಗಿ ಏನೇನೊ ಮಾತಾಡ್ತಾನೆ. ಇವತ್ತು ಬುದ್ಧಿ ಕಲಿಸ್ತೀನಿ ಅಂತ ಮನಸ್ಸಿನಲ್ಲೇ ಅಂದುಕೊಂಡಳು.

ಲಂಚ್ ಅವರ್ ಮುಗಿಯಿತು ಅಂತ ಸೂಚಿಸುವ ಬೆಲ್ ಆದರೂ ತೇಜಸ್ವಿ ಇನ್ನೂ ಕೀ ಮಾಡುತ್ತಲೇ ಇದ್ದ. ನಾಳೆ ಎಡಿಷನ್‌ಗೆ ಹೋಗುವಂಥದ್ದೇನಾದರೂ ಇರಬಹುದು. ಶಿಫ್ಟ್ ಶುರು ಆಗೋದರೊಳಗೆ ಮುಗಿಸುವ ಆತುರದಲ್ಲಿದ್ದ. ಕ್ಯಾಂಟಿನ್‌ನಲ್ಲಿ ಊಟ ಮುಗಿಸಿ, ಹೊರಕ್ಕೆ ಹೋಗಿ ಸಣ್ಣ ವಾಕ್ ಮುಗಿಸಿ ಎಲ್ಲರೂ ಬಂದರೂ ಅವನು ಇನ್ನೂ ಕೀ ಮಾಡುತ್ತಲೇ ಇದ್ದ.

ಚೀಫ್ ಸಬ್ ಬಂದು ಕೂತದ್ದನ್ನು ನೋಡಿದ ತೇಜಸ್ವಿ ಕೀ ಮಾಡುವುದನ್ನು ನಿಲ್ಲಿಸಿ ಗಡಿಯಾರದ ಕಡೆಗೆ ನೋಡಿದ. 'ಸರ್, ಹತ್ತು ನಿಮಿಷ, ಕಾಫಿಹೌಸ್‌ಗೆ ಹೋಗಿ ಬರ್ತೀನಿ. ಇವತ್ತು ಕ್ಯಾಂಟೀನ್‌ಗೆ ಹೋಗೋಕೆ ಆಗಲಿಲ್ಲ. ನೀವು ಏಜೆನ್ಸಿ ಕಾಪಿಗಳನ್ನು ಸಾರ್ಟ್‌ಔಟ್ ಮಾಡೋದರೊಳಗೆ ಬರ್ತೀನಿ' ಅಂತ ಹೇಳಿ ಅವರ ಒಪ್ಪಿಗೆಗೆ ಕಾಯದೆ ಹೊರಕ್ಕೆ ಹೋದ.

ಅರ್ಧ ಗಂಟೆ ಕಳೆದ ಮೇಲೆ ಬಂದು ತನ್ನ ಸೀಟಿನಲ್ಲಿ ಕೂರುತ್ತಿದ್ದಂತೆ ಕ್ಯಾಬಿನ್‌ಗೆ ಬರುವಂತೆ ನ್ಯೂಸ್ ಎಡಿಟರ್ ಇಂಟರ್ ಕಾಂನಲ್ಲಿ ಕರೆದರು.

'ಏನ್ರಿ ತೇಜಸ್ವಿ, ಸುಪ್ರಿಯಾ ನಿಮ್ಮ ಮೇಲೆ ರೈಟಿಂಗ್‌ನಲ್ಲಿ ಕಂಪ್ಲೇಂಟ್ ಕೊಟ್ಟಿದ್ದಾರೆ. ಇವತ್ತು ಅವರು ಆಫೀಸಿಗೆ ಬಂದಾಗ ಅವರ ಕಡೆ ನೋಡಿಕೊಂಡು ತೆಲುಗಿನಲ್ಲಿ ಟೀಸ್ ಮಾಡಿದಿರಂತೆ...' ಅಂತ ಕೇಳಿದರು.

ಅವರ ಮಾತು ಕೇಳಿ ತೇಜಸ್ವಿಗೆ ನಗು ಬಂತು. 'ಸಾರ್, ಅವರು ಬಂದಾಗ ರಾಮ್ಮಾ ನಾ ಬಂಗಾರು ಚೆಲ್ಲಿ ಅಂತ ಹೇಳಿದೆ, ಅಷ್ಟೇ' ಅನ್ನುತ್ತ ಮತ್ತೆ ನಕ್ಕ. ಪೆಚ್ಚಾದ ಸುದ್ದಿ ಸಂಪಾದಕರು ನೀವಿನ್ನು ಹೋಗಿ ಅಂತ ಹೇಳಿ ಸುಪ್ರಿಯಾಳನ್ನು ಕ್ಯಾಬಿನ್‌ಗೆ ಬರುವಂತೆ ಕರೆದರು.

'ಅಲ್ಲಮ್ಮಾ, ಅವನು ರಾಮ್ಮಾ ನಾ ಬಂಗಾರು ಚೆಲ್ಲಿ ಅಂತ ಅಂದನಂತೆ... ನೀವು ಚುಡಾಯಿಸಿದ ಅಂತೀರಿ. ಅವನ ಮಾತಿನ ಅರ್ಥ, ಬಾರಮ್ಮಾ ನನ್ನ ಬಂಗಾರದಂಥ ತಂಗಿ' ಅಂತ ಅನ್ನುತ್ತ ಅವಳ ಮುಖ ನೋಡಿದರು.

'ಸಾರಿ ಸರ್, ನನಗೆ ತೆಲುಗು ಗೊತ್ತಿಲ್ಲ. ಟೀಸ್ ಮಾಡಿರಬಹುದು ಅಂದ್ಕೊಂಡೆ. ಸಾರಿ, ನನ್ನ ಕಂಪ್ಲೇಂಟ್ ವಾಪಸ್ ತಗೊಂಡಿದೀನಿ...' ಅನ್ನುತ್ತ ಹೊರಕ್ಕೆ ಹೋದಳು.

ತೇಜಸ್ವಿ ಕೂತಿದ್ದ ಕುರ್ಚಿ ಪಕ್ಕ ಬಂದು ನಿಂತ ಸುಪ್ರಿಯಾ, 'ಸಾರಿ ತೇಜಸ್ವಿ... ನಂಗೆ ತೆಲುಗು ಗೊತ್ತಿಲ್ಲ. ನೀವು ಹೇಳಿದ್ದು ಅರ್ಥ ಆಗಲಿಲ್ಲ. ಟೀಸ್ ಮಾಡಿರಬಹುದು ಅಂತ ಅಂದ್ಕೊಂಡೆ. ಈ ಆಫೀಸಿಗೆ ಸೇರಿ